ಮಕ್ಕಳ ನಾಳೆಗಳಿಗೆಂದು ಹಣ ಕೂಡಿಡುತ್ತೇವೆ, ಆಸ್ತಿ ಸಂಪಾದಿಸುತ್ತೇವೆ. ಇದೆಲ್ಲ ವೈಯಕ್ತಿಕ ಉಳಿತಾಯದ ಮಾತಾಯಿತು. ಸಾಮಾಜಿಕ ಹಿತಾಸಕ್ತಿಗಾಗಿ ಯಾವ ಉಳಿತಾಯ ಮಾಡಿದ್ದೀರಿ? ಅದೆಂಥ ಉಳಿತಾಯ ಎನ್ನುವಿರಾ? ಅದು, ಹನಿ ಹನಿ ನೀರನ್ನು ಮಣ್ಣಿಗೆ ಸೇರಿಸುವ ಉಳಿತಾಯ! ಪ್ರಜ್ಞಾಪೂರ್ವಕವಾಗಿ ಅಂತರ್ಜಲ ವೃದ್ಧಿಸದೆ ಹೋದರೆ, ಮುಂದಿನ ತಲೆಮಾರುಗಳಿಗೆ ನಮ್ಮಿಂದ ಉಳಿಯುವುದು ಮರಳುಗಾಡಷ್ಟೇ. ನಾಡಿನಲ್ಲಿನ ಅಂತರ್ಜಲ ಸಂಪತ್ತು ವರ್ಷದಿಂದ ವರ್ಷಕ್ಕೆ ಕುಸಿಯುತ್ತಲೇ ಇದೆ. ಕೂತು ತಿನ್ನುವವನಿಗೆ ಕೊಪ್ಪರಿಗೆ ಹೊನ್ನು ಸಾಲದೆನ್ನುವ ಗಾದೆ ನೀರಿನ ಬಳಕೆ–ಸಂಗ್ರಹಕ್ಕೂ ಹೊಂದುವಂತಹದ್ದು. ಧಗೆಯೊಂದಿಗೆ ನೀರಿನ ಕೊರತೆಯ ದಿನಗಳ ಬೇಸಿಗೆ ಸನ್ನಿಹಿತವಾಗುತ್ತಿರುವ ಸಂದರ್ಭದಲ್ಲಿ, ಅಂತರ್ಜಲದ ಕುರಿತ ವಿಸ್ತೃತ ವಿಶ್ಲೇಷಣೆ.


**■ ಟಿ.ಎಂ. ಶಿವಶಂಕರ್**

ಲೇಖಕರು ನಿವೃತ್ತ ಹಿರಿಯ ಭೂ–ಜಲ ವಿಜ್ಞಾನಿ




ಜಲಕ್ಷಾಮ ಈಗ ವಿಶ್ವವ್ಯಾಪಿ. ಸ್ಪೇನ್‌ನ ಈ ಚಿತ್ರ ನೋಡಿ. ಬಿರುಕು ಬಿಟ್ಟಿರುವ ಜಲಾಶಯದಲ್ಲಿ ಓಡಾಡುತ್ತಿರುವ ವ್ಯಕ್ತಿಯೊಬ್ಬರು ವರ್ತಮಾನದ ನೀರಿನ ಬಿಕ್ಕಟ್ಟಿನ ಸಾಕ್ಷಿಪ್ರಜ್ಞೆಯಂತೆ ಕಾಣಿಸುತ್ತಿದ್ದಾರೆ. ಫೋಟೊ: ರಾಯಿಟರ್ಸ್